1ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು 270-2025**

**ಸಿ.ಡಬ್ಲ್ಯು -20, ಪಿ.ಡಬ್ಲ್ಯು-5**

**ಸಾಕ್ಷಿದಾರರ ಹೆಸರು** : ನಾರಾಯಣ್
ತಂದೆಯ **ಹೆಸರು** : ಭೀರಪ್ಪ
**ವಯಸ್ಸು** : 46 ವರ್ಷ
**ಉದ್ಯೋಗ** : ಪೊಲೀಸ್ ಉಪ ನಿರೀಕ್ಷಕರು, ದೊಡ್ಡ ಪೇಟೆ ಪೊಲೀಸ್ ಠಾಣೆ, ಶಿವಮೊಗ್ಗ.
**ವಾಸ** : ಶಿವಮೊಗ್ಗ

**ಪ್ರಮಾಣೀಕರಿಸಿದ ದಿನಾಂಕ :09.06.2026.**

**ಮುಖ್ಯ ವಿಚಾರಣೆ :** ಸ.ಸ.ಅ. ರವರಿಂದ

1. ನಾನು ದಿ:07.03.2023 ರಿಂದ ದಿ:17.04.2024 ರವರೆಗೆ ಸಾಗರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿ:21.01.2024 ರಂದು ಚಾಸ 16 ರವರು ನೀಡಿದ ವರದಿಯನ್ನು ಸ್ವೀಕರಿಸಿ ಸಿ.ಆರ್. 251/2023 ರ ಆರೋಪಿತರಾದ ಷಣ್ಮುಗ ಹಾಗೂ ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ ಧನುಷ್ ನನ್ನು ವಶಕ್ಕೆ ಪಡೆದು ಇಬ್ಬರ ಹೇಳಿಕೆಯನ್ನು ಪಡೆದುಕೊಂಡೆ. 1ನೇ ಆರೋಪಿ ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ತಾವು ಕಳ್ಳತನ ಮಾಡಿದ ವಸ್ತುಗಳನ್ನು ತೋರಿಸುವುದಾಗಿ ಹೇಳಿದ್ದು, ಚಾಸ 9 ರಿಂದ 11 ರವರನ್ನು ಬರ ಮಾಡಿಕೊಂಡು ಅವರಿಗೆ ವಿಷಯವನ್ನು ತಿಳಿಸಿ ಅವರು ಪಂಚರಾಗಿ ಬರಲು ಒಪ್ಪಿದ ನಂತರ 1ನೇ ಆರೋಪಿ ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ತೋರಿಸಿದ ವಾಹನವನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ದ್ವಿ ಚಕ್ರ ವಾಹನ ಸಂಖ್ಯೆ ಕೆ ಎ 15 ಇ ಜಿ 3707 ನೇದ್ದರ ಡಿಯೋ ಸ್ಕೂಟಿ ವಾಹನದ ಡಿಕ್ಕಿಯನ್ನು ತೆರೆದಾಗ ಡಿಕ್ಕಿಯ ಒಳಭಾಗದಲ್ಲಿ ಒಟ್ಟು 13 ಬಂಗಾರದ ಆಭರಣಗಳು ದೊರೆತಿದ್ದು, ಅವುಗಳನ್ನು ಚಾಸ 11 ರವರ ಮುಖಾಂತರ ಪರೀಕ್ಷೆಗೆ ಒಳಪಡಿಸಿ ನಂತರ ಅವುಗಳನ್ನು ಅಮಾನತ್ತು ಪಂಚನಾಮೆಯ ಕ್ರಮವನ್ನು ಜರುಗಿಸಿವುದರ ಮೂಲಕ 13 ಬಂಗಾರದ ಆಭರಣಗಳು ಹಾಗೂ ದ್ವಿ ಚಕ್ರ ವಾಹನವನ್ನು ವಶಕ್ಕೆ ಪಡೆದಿರುತ್ತೇನೆ. ಪಂಚನಾಮೆಯ ಕಾಲಕ್ಕೆ ಪೋಟೋ ತೆಗೆಯಲಾಗಿರುತ್ತದೆ. ಜಪ್ತುಪಡಿಸಿಕೊಂಡ ವಸ್ತುಗಳಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯಕ್ಕೆ ಪಿ.ಎಫ್. ಅನ್ನು ನಿವೇದಿಸಿಕೊಂಡಿರುತ್ತೇನೆ.

3. ಅದೇ ದಿನ 1ನೇ ಆರೋಪಿ ತಾನು ಕಳ್ಳತನ ಮಾಡಿದ ಸ್ಥಳಗಳನ್ನು ತೋರಿಸುವುದಾಗಿ ತಿಳಿಸಿದ್ದು ಚಾಸ 9 ಮತ್ತು 10 ರವರನ್ನು ಬರ ಮಾಡಿಕೊಂಡು ವಿಷಯವನ್ನು ತಿಳಿಸಿ ಅವರು ಒಪ್ಪಿದ

ನಂತರ ಆರೋಪಿ ತೋರಿಸಿದ ಒಟ್ಟು 5 ಸ್ಥಳಗಳ ಪಂಚನಾಮೆಯನ್ನು ಚಾಸ 9 ಮತ್ತು 10 ರವರ ಸಮಕ್ಷಮ ಜರುಗಿಸಿರುತ್ತೇನೆ. ಆ 5 ಸ್ಥಳಗಳ ಪೈಕಿ ಈ ಪ್ರಕರಣದ ಸ್ಥಳವೂ ಸಹ ಇರುತ್ತದೆ. ಅದೇ ದಿನ ಈ ಪ್ರಕರಣದ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನ ಶಾಲಾ ದೃಢೀಕರಣ ಪತ್ರವನ್ನು ಪಡೆದು ಆತನ ವಯಸ್ಸಿನ ಆಧಾರದ ಮೇಲೆ ಅತನನ್ನು ಬಾಲ ನ್ಯಾಯ ಮಂಡಳಿಯ ಮುಂದೆ ಹಾಜರುಪಡಿಸಿರುತ್ತೇನೆ. ಅದೇ ದಿನ ಆರೋಪಿಯನ್ನು ಸೂಕ್ತ ಬೆಂಗಾವಲಿನೊಂದಿಗೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

4. ದಿ:19.03.20224 ರಂದು ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಓಮಿನಿ ವಾಹನವನ್ನು ಸೂಕ್ತ ದಾಖಲೆಗಳನ್ನು ಪಡೆಯುವುದರ ಮೂಲಕ ಅದರ ಮಾಲೀಕರಿಗೆ ನೀಡಿರುತ್ತೇನೆ.

5. ಸಾಕ್ಷಿಯು ಪಂಚರಿಗೆ ನೀಡಿದ ನೋಟೀಸ್ ಗಳ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 14 ಮತ್ತು 15 ಎಂದು ಗುರುತಿಸಲಾಯಿತು. ಸಾಕ್ಷಿಯು ಅಮಾನತ್ತು ಪಂಚನಾಮೆಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 16 ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತ್ತಿನ ಪಟ್ಟಿಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 17 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿ ತೋರಿಸಿದ ಸ್ಥಳದ ಪಂಚನಾಮೆಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 18 ಎಂದು ಗುರುತಿಸಲಾಯಿತು. ಸಾಕ್ಷಿಯು 1ನೇ ಆರೋಪಿ ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನ ಸ್ವ ಇಚ್ಛಾ ಹೇಳಿಕೆಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 19 ಮತ್ತು 20 ಎಂದು ಗುರುತಿಸಲಾಯಿತು. ಸಾಕ್ಷಿಯು 4 ಛಾಯಾಚಿತ್ರಗಳಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, 4 ಛಾಯಾಚಿತ್ರಗಳನ್ನು ನಿಪಿ 21 ರಿಂದ 24 ಎಂದು ಗುರುತಿಸಲಾಯಿತು. ಸಾಕ್ಷಿಯು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನ ಶಾಲಾ ದೃಢೀಕರಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 25 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು:- ಆರೋಪಿ ಪರ ಶ್ರೀ ಕೆ.ವಿ.ಪಿ. ವಕೀಲರಿಂದ</u>

1. ಆರೋಪಿತರ ಗುರುತಿಸುವಿಕೆಯ ಕವಾಯತನ್ನು ನಾವು ಮಾಡಿರುವುದಿಲ್ಲ. ಓಮಿನಿ ವಾಹನದಲ್ಲಿ 1ನೇ ಆರೋಪಿ ಇರಲಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಯಾವುದೇ ಕಳ್ಳತನವನ್ನು ಮಾಡಿಲ್ಲ ಮತ್ತು ಆ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ಓಮಿನಿ ವಾಹನದಲ್ಲಿ ಧೂಮಪಾನ ಮಾಡಲು ಬಂದ 3 ವ್ಯಕ್ತಿಗಳು ಇದ್ದರು ಆ 3 ಜನರಲ್ಲಿ ಈ ಪ್ರಕರಣದ ಆರೋಪಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅನಾವಶ್ಯಕವಾಗಿ ಆರೋಪಿತನನ್ನು ಈ ಪ್ರಕರಣದಲ್ಲಿ ಸೇರಿಸಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**
**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.